ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ನ್ಯಾಯಾಲಯ, ಟಿ ನರಸೀಪುರ.

**ಸಿ ಸಿ ನಂ. 1014/2014**

ಫಿರ್ಯಾದುದಾರರು : ಬನ್ನೂರು ಠಾಣಾ ಆರಕ್ಷಕರು

ವಿರುದ್ಧ

ಆರೋಪಿ/ತರು

1. ಜಯರಾಮೇಗೌಡ ಬಿನ್ ಲೇಟ್ ಭೋರೇಗೌಡ, 50 ವರ್ಷ,
2. ಕೃಷ್ಣಮೂರ್ತಿ ಬಿನ್ ಭೋರೇಗೌಡ, 45 ವರ್ಷ,
3. ಬಲದೇವ ಬಿನ್ ಲೇಟ್ ಭೋರೇಗೌಡ, 58 ವರ್ಷ,
4. ಸಿದ್ದಲಿಂಗ ಬಿನ್ ಲೇಟ್ ಭೋರೇಗೌಡ, 27 ವರ್ಷ,
5. ಸೋಮಶೇಖರ ಬಿನ್ ನಿಂಗೇಗೌಡ, 27 ವರ್ಷ,
6. ಭಾಸ್ಕರ ಬಿನ್ ನಿಂಗೇಗೌಡ, 26 ವರ್ಷ,
7. ಪ್ರದೀಪ್ ಕುಮಾರ್ ಬಿನ್ ಶಾಂತಮ್ಮ, 34 ವರ್ಷ,

ಎಲ್ಲರೂ ಗೊರವನಹಳ್ಳಿ ಗ್ರಾಮ, ಟಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆಯ ವಾಸಿಗಳು.

**ದೋಷಾರೋಪಣೆ**

ಶ್ರೀ ದಿನೇಶ್. ಬಿ.ಜಿ., ಬಿ.ಕಾಂ., ಎಲ್ಎಲ್.ಬಿ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಟಿ. ನರಸೀಪುರ, ಆದ ನಾನು ಈ ಕೆಳಕಂಡಂತೆ ನಿಮ್ಮ ವಿರುದ್ಧ ದೋಷಾರೋಪಣೆ ರೂಪಿಸುತ್ತೇನೆ.

ದಿಃ 27.02.2014 ರಂದು ರಾತ್ರಿ ಸುಮಾರು 7.30 ಗಂಟೆಯಲ್ಲಿ ಬನ್ನೂರು ಠಾಣಾ ಸರಹದ್ದಿಗೆ ಸೇರಿದ ಟಿ ನರಸೀಪುರ ತಾಲ್ಲೂಕು ಬನ್ನೂರು ಹೋಬಳಿ ಗೊರವನಹಳ್ಳಿ ಗ್ರಾಮದ ನಿಂಗೇಗೌಡರ ಮಗ ಸೋಮಶೇಖರರವರ ಮನೆಯ ಮುಂಭಾಗ ಸಾರ್ವಜನಿಕ ರಸ್ತೆಯ ಬಳಿ ಈ ಹಿಂದೆ ಜಮೀನಿನ ವಿಚಾರದಲ್ಲಿ ಗಲಾಟೆಯಾಗಿದ್ದು ಹಳೇ ದ್ವೇಷದಿಂದ ಆರೋಪಿತರಾದ ನೀವು ಏಕೋದ್ದೇಶದಿಂದ 1 ರಿಂದ 7ನೇ ಆರೋಪಿತರಾದ ನೀವು ಅಕ್ರಮಕೂಟ ಕಟ್ಟಿಕೊಂಡಿದ್ದ ನಿಮ್ಮ ಈ ಕ್ರಮವು ಭಾ.ದಂ.ಸಂ. ಕಲಂ 143 ಸಹಿತ 149 ರಡಿಯ ಅಪರಾಧವಾಗಿದ್ದು, ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಅದೇ ದಿವಸ, ಅದೇ ಸಮಯ, ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಏಕೋದ್ದೇಶದಿಂದ 1 ರಿಂದ 7ನೇ ಆರೋಪಿತರಾದ ನೀವು ಅಕ್ರಮಕೂಟ ಕಟ್ಟಿಕೊಂಡು ದೊಂಬಿ ಮಾಡಿದ ನಿಮ್ಮ ಈ ಕ್ರಮವು ಭಾ.ದಂ.ಸಂ. ಕಲಂ 147 ಸಹಿತ 149 ರಡಿಯ ಅಪರಾಧವಾಗಿದ್ದು, ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಅದೇ ದಿವಸ, ಅದೇ ಸಮಯ, ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಏಕೋದ್ದೇಶದಿಂದ 1ನೇ ಆರೋಪಿಯಾದ ನೀವು ಮಾರಕ ಆಯುಧವಾದ ರಿಪೀಸ್ ಪಟ್ಟಿಯನ್ನು, 5ನೇ ಆರೋಪಿಯಾದ ನೀವು ಮಾರಕ ಆಯುಧವಾದ ದೊಣ್ಣೆಯನ್ನು, 6ನೇ ಆರೋಪಿಯಾದ ನೀವು ಮಾರಕ ಆಯುಧವಾದ ಪಿಚ್ಚುಕೊಡಲಿಯನ್ನು ಹಿಡಿದುಕೊಂಡು ದೊಂಬಿ ಮಾಡಿದ ನಿಮ್ಮ ಈ ಕ್ರಮವು ಭಾ.ದಂ.ಸಂ. ಕಲಂ 148 ಸಹಿತ 149 ರಡಿಯ ಅಪರಾಧವಾಗಿದ್ದು, ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಅದೇ ದಿವಸ, ಅದೇ ಸಮಯ, ಅದೇ ಸ್ಥಳದಲ್ಲಿ, ಚಾ ಸಾ 1 ರವರು ಚಾ ಸಾ 2 ರವರ ಜೊತೆ ಅವರ ಊರಿಗೆ ಮೋಟಾರ್ ಸೈಕಲ್‌ನಲ್ಲಿ 5ನೇ ಆರೋಪಿಯಾದ ನಿಮ್ಮ ಮನೆ ಮುಂಭಾಗ ಹೋಗುತ್ತಿರುವಾಗ ಆರೋಪಿತರಾದ ನೀವು ಏಕೋದ್ದೇಶದಿಂದ 3ನೇ ಆರೋಪಿಯಾದ ನೀವು ಚಾ ಸಾ 1 ರವರನ್ನು ತಬ್ಬಿಹಿಡಿದುಕೊಂಡು ಹಾಗೂ ಬಿಡಿಸಲು ಬಂದ ಚಾ ಸಾ 2 ರವರಿಗೆ 2ನೇ ಆರೋಪಿಯಾದ ನೀವು ನೀನ್ಯಾರೋ ನಮ್ಮ ವಿಚಾರಕ್ಕೆ ಬರೋಕ್ಕೆ ಎಂದು ತಬ್ಬಿ ಹಿಡಿದುಕೊಂಡು ಮುಂದೆ ಹೋಗದಂತೆ ಅಕ್ರಮ ತಡೆಯುಂಟು ಮಾಡಿದ ನಿಮ್ಮ ಈ ಕ್ರಮವು ಭಾ.ದಂ.ಸಂ. ಕಲಂ 341 ಸಹಿತ 149 ರಡಿಯ ಅಪರಾಧವಾಗಿದ್ದು, ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಅದೇ ದಿವಸ, ಅದೇ ಸಮಯ, ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಏಕೋದ್ದೇಶದಿಂದ ಬಿಡಿಸಲು ಬಂದ ಚಾ ಸಾ 2 ರವರಿಗೆ 5ನೇ ಆರೋಪಿಯಾದ ನೀವು ದೊಣ್ಣೆಯಿಂದ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನು ಉಂಟುಮಾಡಿರುವ ನಿಮ್ಮ ಈ ಕ್ರಮವು ಭಾ.ದಂ.ಸಂ. ಕಲಂ 324 ಸಹಿತ 149 ರಡಿಯ ಅಪರಾಧವಾಗಿದ್ದು, ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಅದೇ ದಿವಸ, ಅದೇ ಸಮಯ, ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಏಕೋದ್ದೇಶದಿಂದ 1ನೇ ಆರೋಪಿಯಾದ ನೀವು ರಿಪೀಸ್ ಪಟ್ಟಿಯಿಂದ ಚಾ ಸಾ 1 ತಲೆಗೆ ಹೊಡೆದು, 5ನೇ ಆರೋಪಿಯಾದ ನೀವು ದೊಣ್ಣೆಯಿಂದ ಚಾ ಸಾ 1 ತಲೆಗೆ ಹೊಡೆದು, 6ನೇ ಆರೋಪಿಯಾದ ನೀವು ಪಿಚ್ಚುಕೊಡಲಿಯಿಂದ ಚಾ ಸಾ 1 ರವರ ಎಡಮೊಣಕೈಗೆ ಮತ್ತು ಬಲಗೈಗೆ ಹೊಡೆದು ತೀವ್ರ ಸ್ವರೂಪದ

ಗಾಯವನ್ನು ಉಂಟುಮಾಡಿರುವ ನಿಮ್ಮ ಈ ಕ್ರಮವು ಭಾ.ದಂ.ಸಂ. ಕಲಂ 326 ಸಹಿತ 149 ರಡಿಯ ಅಪರಾಧವಾಗಿದ್ದು, ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಅದೇ ದಿವಸ, ಅದೇ ಸಮಯ, ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಏಕೋದ್ದೇಶದಿಂದ 4 ಹಾಗೂ 7ನೇ ಆರೋಪಿತರಾದ ನೀವು ಉಳಿದ ಆರೋಪಿತರಿಗೆ ಇವರನ್ನು ಬಿಡಬೇಡಿ ಕೊಂದು ಹಾಕಿ ಎಂದು ಕುಮ್ಮಕ್ಕು ನೀಡಿದ ನಿಮ್ಮ ಈ ಕ್ರಮವು ಭಾ.ದಂ.ಸಂ ಕಲಂ 114 ಸಹಿತ 149 ರಡಿಯ ಅಪರಾಧವಾಗಿದ್ದು, ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಅದೇ ದಿವಸ, ಅದೇ ಸಮಯ, ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಏಕೋದ್ದೇಶದಿಂದ 4 ಹಾಗೂ 7ನೇ ಆರೋಪಿತರಾದ ನೀವು ಉಳಿದ ಆರೋಪಿತರಿಗೆ ಚಾ ಸಾ 1 ಹಾಗೂ 2 ರವರಿಗೆ ಇವರನ್ನು ಬಿಡಬೇಡಿ ಕೊಂದು ಹಾಕಿ ಎಂದು ಕೊಲೆ ಬೆದರಿಕೆ ಹಾಕಿದ ನಿಮ್ಮ ಈ ಕ್ರಮವು ಭಾ.ದಂ.ಸಂ. ಕಲಂ 506 ಸಹಿತ 149 ರಡಿಯ ಅಪರಾಧವಾಗಿದ್ದು, ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಸದರಿ ಆರೋಪಗಳ ವಿಚಾರಣೆಯು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ನಡೆಯಬೇಕೆಂದು ನಿರ್ದೇಶಿಸುತ್ತೇನೆ.

ದಿಃ 14.03.2016

ಸಹಿ/-
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಟಿ.
ನರಸೀಪುರ

ಟಿ. ನರಸೀಪುರದ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.ರವರ ನ್ಯಾಯಾಲಯದಲ್ಲಿ

<u>ಸಿ ಸಿ ನಂ. 1014/2014</u>

ಫಿರ್ಯಾದುದಾರರು : ಬನ್ನೂರು ಠಾಣಾ ಆರಕ್ಷಕರು

ವಿರುದ್ಧ

ಆರೋಪಿ/ತರು

1. ಜಯರಾಮೇಗೌಡ
2. ಕೃಷ್ಣಮೂರ್ತಿ
3. ಬಲದೇವ
4. ಸಿದ್ದಲಿಂಗ
5. ಸೋಮಶೇಖರ
6. ಭಾಸ್ಕರ
7. ಪ್ರದೀಪ್ ಕುಮಾರ್

<u>ದೋಷಾರೋಪಣೆ / ಆಪಾದನೆ</u>

1. ಈಗ ನಾನು ಓದಿ ಹೇಳಿದ ದೋಷಾರೋಪಣೆ / ಆಪಾದನೆ ನಿಮಗೆ ತಿಳಿಯಿತೆ ?
ಉತ್ತರಃ ತಿಳಿಯಿತು

2. ಆ ಬಗ್ಗೆ ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗತಕ್ಕದ್ದೊ ?
ಉತ್ತರಃ ಸುಳ್ಳು

ಆರೋಪಿಗೆ ತಿಳಿಯುವ ಭಾಷೆಯಲ್ಲಿ ಪ್ರಶ್ನಿಸಿ, ನಂತರ ಆತನು/ಅವಳು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲು ಮಾಡಲಾಯಿತು.

ಸಹಿ/- : ಸಹಿ/-

ಪ್ರ.ದ.ನ್ಯಾ.ದಂ.,